<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.165-2022

ದೋ.ಸಾ. 23
ಫ್ರಾ.ಸಾ. 16
ಪ್ರ.ವ.ಬೊ.ದಿನಾಂಕ. 18-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ವೀರೇಶ |
| ತಂದೆ / ಗಂಡನ ಹೆಸರು | - | ರುದ್ರಯ್ಯ |
| ವಯಸ್ಸು | - | 40 |
| ಉದ್ಯೋಗ | - | ಆರಕ್ಷಕ ನಿರೀಕ್ಷಕರು, ವಿವೇಕ ನಗರ ಪೊಲೀಸ್ ಠಾಣೆ, ಬೆಂಗಳೂರು |
| ವಾಸ ಸ್ಥಳ | - | ಬೆಂಗಳೂರು |

ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ದಿಃ 25-11-2019 ರಿಂದ 01-06-2021 ರವರೆಗೆ ನಾನು ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿಃ 16-10-2020 ರಂದು ಸಂಜೆ 6-00 ಗಂಟೆಗೆ ನಾನು ಠಾಣೆಯಲ್ಲಿ ಇರುವಾಗ ಫ್ರಾ.ಸಾ.14 ರವರು ಠಾಣೆಗೆ ಆಗಮಿಸಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ.160/2020 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದೂರು ಈಗಾಗಲೆ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ.33 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.33(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿತರ ಪತ್ತೆಗಾಗಿ ಠಾಣಾ ಸಿಬ್ಬಂದಿ ಹೆಚ್ ಸಿ 366, ಪಿಸಿ 120, 479 ರವರನ್ನು ನೇಮಿಸಿರುತ್ತೇನೆ. ಆ ದಿನ ರಾತ್ರಿಯಾದ ಕಾರಣ ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಬರೆಯಲು ಸಾಧ್ಯವಾಗಿರುವುದಿಲ್ಲ. ತದನಂತರ ನಾನು ಈ ಪ್ರಕರಣದ ಸಾಕ್ಷಿದಾರರಾದ ಫ್ರಾ.ಸಾ.11 ಮತ್ತು 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಫ್ರಾ.ಸಾ.15 ರವರು ನಿ.ಪಿ.32 ರಂತೆ ನನ್ನ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ನಂತರ ಅದೇ ದಿನ ನಮ್ಮ ಸಿಬ್ಬಂದಿಯವರು ರಾತ್ರಿ 9-20 ಗಂಟೆಗೆ ಆರೋಪಿತರನ್ನು ಬೆಂಕಿಕೆರೆಯ ಲೋಕಿಕೆರೆ ರಸ್ತೆಯ ಬಳಿ ವಶಕ್ಕೆ ಪಡೆದು ರಾತ್ರಿ 9-50 ಗಂಟೆಗೆ ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ನಂತರ ಸದರಿ ಇಬ್ಬರು ಆರೋಪಿತರನ್ನು ವಿಚಾರಿಸಿ ಅವರನ್ನು ವಶಕ್ಕೆ ಪಡೆದುಕೊಂಡು ಅವರ ಸ್ವ ಖುಷಿ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಬಳಿ ಸಂಪೂರ್ಣ ಕಡತಗಳು ಇಲ್ಲ ಎಂದು ನುಡಿದಿದ್ದು, ಆ ಕಾರಣ ಸಂಪೂರ್ಣ ಕಡತವನ್ನು ಪಡೆದುಕೊಂಡು ಸಾಕ್ಷಿ ನುಡಿಯುವಂತೆ ಸೂಚಿಸಿ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

SC. No.165-2022
ಪಿಡಬ್ಲ್ಯೂ-16
ದಿಃ 27-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
ಮುಂದುವರೆದ ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ತದನಂತರ ಅದೇ ದಿನ ಪ್ರಾ.ಸಾ.8 ಮತ್ತು 9 ರವರಿಗೆ ನಿ.ಪಿ.15 ಮತ್ತು 21 ರಂತೆ ನೋಟೀಸನ್ನು ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮ ಆರೋಪಿತರು ಹಾಜರುಪಡಿಸಿದ ಒಂದು ಬೈಕನ್ನು ನಿ.ಪಿ.16 ಪಂಚನಾಮೆಯಡಿಯಲ್ಲಿ ವಶಕ್ಕೆ ಪಡೆದಿರುತ್ತೇನೆ. ಆ ಸಮಯದಲ್ಲಿ ನಿ.ಪಿ.4 ರಂತೆ ಪೋಟೋ ತೆಗೆಯಲಾಗಿರುತ್ತದೆ. ನಿ.ಪಿ.15, 16 ಮತ್ತು 21 ರಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.15(ಬಿ), 16(ಸಿ) ಮತ್ತು 21(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ವಶಕ್ಕೆ ಪಡೆದುಕೊಂಡು ಮೋಟಾರ್ ಸೈಕಲನ್ನು ಪಿಎಪ್ ಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದಿನ ರಾತ್ರಿಯಾದ ಕಾರಣ ಆರೋಪಿತರನ್ನು ಠಾಣೆಯಲ್ಲಿ ಸೂಕ್ತ ಭದ್ರಿಕೆಯಲ್ಲಿ ಇಟ್ಟಿರುತ್ತೇನೆ.

ನಂತರ ದಿಃ 17-10-2020 ರಂದು ಆರೋಪಿತರನ್ನು ಕೂಲಂಕುಷವಾಗಿ ವಿಚಾರಿಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸದರಿಯವರು ತಮ್ಮ ಹೇಳಿಕೆಗಳಲ್ಲಿ " ನನ್ನ ಜೊತೆ ಬಂದರೆ ನಾನು ಚಾಕುವನ್ನು ಖರೀದಿ ಮಾಡಿದ ಸ್ಟೋರ್ ಹಾಗೂ ಚಾಕುವನ್ನು ಬಿಸಾಕಿರುವ ಜಾಗವನ್ನು ತೋರಿಸುತ್ತೇನೆ " ಎಂದು ಹೇಳಿರುತ್ತಾರೆ. ಸದರಿ ಹೇಳಿಕೆಯ ಭಾಗಗಳನ್ನು ಕ್ರಮವಾಗಿ ನಿ.ಪಿ.34 ಮತ್ತು 35 ಎಂದು ಗುರುತಿಸಲಾಯಿತು.

ತದನಂತರ ಪ್ರಾ.ಸಾ.11 ರವರನ್ನು ಠಾಣೆಗೆ ಬರಮಾಡಿಕೊಂಡು ಘಟನಾ ಸ್ಥಳಕ್ಕೆ ತೆರಳಿ ಅಲ್ಲಿ ಪ್ರಾ.ಸಾ.8 ಮತ್ತು 9 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.18 ರಂತೆ ಪಂಚನಾಮೆಯನ್ನು ಬರೆದು, ನಿ.ಪಿ.19 ಮತ್ತು 20 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ. ನಿ.ಪಿ.18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.18(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಈಗ ನೋಡುತ್ತಿರುವ ಮು.ಮಾ.8 ಮತ್ತು 10 ನ್ನು ವಶಪಡಿಸಿಕೊಂಡು ಅವುಗಳನ್ನು ಮು.ಮಾ.9 ಮತ್ತು 11 ರಲ್ಲಿ ಇಟ್ಟು ಅರಗು ಸೀಲು ಹಾಕಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಿರುತ್ತೇನೆ. ಮು.ಮಾ.9 ಮತ್ತು 11 ರಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ಮು.ಮಾ.9(ಡಿ) ಮತ್ತು 11(ಡಿ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅಲ್ಲದೇ ಆ ಸಮಯದಲ್ಲಿ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ. ಅದನ್ನು ನಿ.ಪಿ.36 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು.

ನಂತರ ಠಾಣೆಗೆ ಪ್ರಾ.ಸಾ.4 ಮತ್ತು ಚಾ.ಸಾ.5 ರವರನ್ನು ಬರಮಾಡಿಕೊಂಡು ಅವರಿಗೆ ನಿ.ಪಿ.12 ಹಾಗೂ ಇನ್ನೊಂದು ನೋಟೀಸನ್ನು ಜಾರಿ ಮಾಡಿರುತ್ತೇನೆ. ನಿ.ಪಿ.12 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು

ಗುರುತಿಸಲಾಯಿತು. ಅಲ್ಲದೇ ಚಾ.ಸಾ.5 ರವರಿಗೆ ನೀಡಿದ ನೋಟೀಸನ್ನು ನಿ.ಪಿ.37 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.37(ಎ) ಎಂದು ಗುರುತಿಸಲಾಯಿತು.

ನಂತರ ಆರೋಪಿತರು ನಮ್ಮನ್ನು ಕೆಟಿಜೆ ನಗರದ ಶಿವಪ್ಪ ಸರ್ಕಲ್ ಬಳಿ ಇರುವ ಎಸ್ ಎಸ್ ಜನರಲ್ ಸ್ಟೋರ್ಸ್ ಬಳಿ ಕರೆದುಕೊಂಡು ಹೋಗಿ ಅಲ್ಲಿ ತಾವು ಒಂದು ಚಾಕುವನ್ನು ಖರೀದಿ ಮಾಡಿರುತ್ತೇವೆ ಎಂದು ತೋರಿಸಿರುತ್ತಾರೆ. ಆ ಸಮಯದಲ್ಲಿ ಸದರಿ ಅಂಗಡಿಯಲ್ಲಿ ಫ್ರಾ.ಸಾ.7 ರವರು ಇದ್ದರು. ನಂತರ ಫ್ರಾ.ಸಾ.7 ರವರ ಹೇಳಿಕೆಯನ್ನು ಪಡೆದುಕೊಂಡು ಸ್ಥಳದಲ್ಲಿ ನಿ.ಪಿ.6 ರಂತೆ ಪಂಚನಾಮೆಯನ್ನು ತಯಾರಿಸಿರುತ್ತೇವೆ. ನಿ.ಪಿ.6 ಕ್ಕೆ ಫ್ರಾ.ಸಾ.7 ರವರು ಕೂಡ ಸಹಿ ಮಾಡಿರುತ್ತಾರೆ. ನಿ.ಪಿ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿ.ಪಿ.7 ಮತ್ತು 8 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ.

ನಂತರ ಆರೋಪಿತರು ತ್ರಿಶೂಲ್ ಕಂಪರ್ಟ್ಸ್ ನ ಮುಂಭಾಗದ ಬಳಿ ನಮ್ಮನ್ನು ಕರೆದುಕೊಂಡು ಹೋಗಿದ್ದು, ಅಲ್ಲದೇ ಅಲ್ಲಿನ ಒಂದು ಪೊದೆಯ ಒಳಗಡೆ ಚಾಕುವನ್ನು ಬಿಸಾಡಿದ್ದೇವೆ ಎಂದು ಹೇಳಿದ್ದಲ್ಲದೇ ಸದರಿ ಪೊದೆಯಿಂದ ಒಂದು ಚಾಕುವನ್ನು ತೆಗೆದು ನೀಡಿರುತ್ತಾರೆ. ನಂತರ ಸದರಿ ಚಾಕು ಮು.ಮಾ.5 ನ್ನು ವಶಕ್ಕೆ ಪಡೆದು ಅದನ್ನು ಮು.ಮಾ.6 ಚೀಲದಲ್ಲಿ ಇಟ್ಟು ಅರಗು ಸೀಲು ಮಾಡಿ ಅದಕ್ಕೆ ನನ್ನ ಮತ್ತು ಪಂಚ ಸಾಕ್ಷಿದಾರರ ಸಹಿಯುಳ್ಳ ಚೀಟಿ ಅಂಟಿಸಿರುತ್ತೇನೆ. ಮು.ಮಾ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮಾ.6(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿ.ಪಿ.9 ರಂತೆ ಪಂಚನಾಮೆಯನ್ನು ಬರೆದು ನಿ.ಪಿ.10 ಮತ್ತು 11 ರಂತೆ ಫೋಟೋಗಳನ್ನು ತೆಗೆಯಿಸಿರುತ್ತೇನೆ. ನಿ.ಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.5 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಮು.ಮಾ.5 ನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದ ಫ್ರಾ.ಸಾ.6 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅವರು ನನ್ನ ಸಮಕ್ಷಮ ನಿ.ಪಿ.14 ರಂತೆ ಹೇಳಿಕೆ ನೀಡಿರುತ್ತಾರೆ. ನಂತರ ಠಾಣೆಗೆ ಫ್ರಾ.ಸಾ.11 ಮತ್ತು 15 ರವರನ್ನು ಬರಮಾಡಿಕೊಂಡು ಅವರಿಗೆ ಆರೋಪಿತರನ್ನು ತೋರಿಸಿದ್ದು, ಅವರು ಆರೋಪಿತರನ್ನು ಗುರುತಿಸಿದ್ದು, ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಫ್ರಾ.ಸಾ.15 ರವರು ನಿ.ಪಿ.32 ರಂತೆ ನನ್ನ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ನಂತರ ಆರೋಪಿತರನ್ನು ರಿಮಾಂಡ್ ವರದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ನಂತರ ದಿಃ 18-10-2020 ರಂದು ಫ್ರಾ.ಸಾ.2 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ನಾನು ಬಂದೋಬಸ್ಸ್ ಕರ್ತವ್ಯಕ್ಕೆ ಹೊರಗಡೆ ಹೋಗಿದ್ದು, ಆಗ ನನ್ನ ಪ್ರಭಾರದಲ್ಲಿ ಇದ್ದ ಫ್ರಾ.ಸಾ.14 ರವರು ತನಿಖೆ ಮುಂದುವರೆಸಿದ್ದು, ತದನಂತರ ನಾನು ಪುನಃ ಕಡತ ಪಡೆದುಕೊಂಡಿದ್ದು, ನಂತರ ವಶಪಡಿಸಿಕೊಂಡಿದ್ದ ಮುದ್ದೆಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲದೇ ದಿಃ 02-11-2020 ರಂದು ಸದರಿ ರಾಸಾಯನಿಕ ವಿಶ್ಲೇಷಣೆಗೆ ವಸ್ತುಗಳನ್ನು ಸಲ್ಲಿಸಿದ ಕುರಿತು ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ

ಸ್ವೀಕೃತಿಯನ್ನು ನಿ.ಪಿ.38 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.38(ಎ) ಎಂದು ಗುರುತಿಸಲಾಯಿತು. ನಂತರ ದಿಃ 18-11-2020 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರ ಕೋರಿ ಮನವಿ ಸಲ್ಲಿಸಿರುತ್ತೇನೆ. ನಂತರ ದಿಃ 23-11-2020 ರಂದು ಎಸ್ ಎಸ್ ಆಸ್ಪತ್ರೆಯಿಂದ ನಿ.ಪಿ.24 ನ್ನು ಪಡೆದುಕೊಂಡು ಅದರ ಮೂಲಪ್ರತಿಯನ್ನು ಚಿಗಟೇರಿ ಆಸ್ಪತ್ರೆಗೆ ಮುಂದಿನ ಮಾಹಿತಿಗಾಗಿ ಕಳುಹಿಸಿಕೊಟ್ಟಿರುತ್ತೇನೆ. ನಿ.ಪಿ.24 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು.

ನಂತರ ದಿಃ 26-11-2020 ರಂದು ಚಿಗಟೇರಿ ಆಸ್ಪತ್ರೆಯಿಂದ ನಿ.ಪಿ.23 ರಂತೆ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿ.ಪಿ.23 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.23(ಬಿ) ಎಂದು ಗುರುತಿಸಲಾಯಿತು. ನಂತರ ದಿಃ 05-12-2020 ರಂದು ನ್ಯಾಯಾಲಯದ ಆದೇಶದಂತೆ ಚಾ.ಸಾ.8 ಮತ್ತು 9 ರವರನ್ನು ಬರಮಾಡಿಕೊಂಡು ಅವರಿಗೆ ನೋಟೀಸನ್ನು ನೀಡಿ ಮು.ಮಾ.7 ನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನೀಡಲಾದ ಎರಡು ನೋಟೀಸು, ಪಂಚನಾಮೆ ಹಾಗೂ ಫೋಟೋಗಳನ್ನು ಕ್ರಮವಾಗಿ ನಿ.ಪಿ.39, 40, 41, 42, 43 ಮತ್ತು 44 ಎಂದು ಗುರುತಿಸಲಾಯಿತು. ನಿ.ಪಿ.39 ರಿಂದ 41 ರಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿ.ಪಿ.39(ಎ) ದಿಂದ ನಿ.ಪಿ.41(ಎ) ಎಂದು ಗುರುತಿಸಲಾಯಿತು.

ದಿಃ 12-02-2021 ರಂದು ನಿ.ಪಿ.27 ಮತ್ತು 28 ನ್ನು ರಾಸಾಯನಿಕ ವಿಶ್ಲೇಷಣಾ ತಜ್ಞರಿಂದ ಪಡೆದುಕೊಂಡಿರುತ್ತೇನೆ. ನಿ.ಪಿ.27 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.27(ಬಿ) ಎಂದು ಗುರುತಿಸಲಾಯಿತು. ನಂತರ ದಿಃ 16-02-2021 ರಂದು ವಶಪಡಿಸಿಕೊಂಡ ಮು.ಮಾ.5 ನ್ನು ಪರಿಶೀಲಿಸಿ ಅಂತಿಮ ಅಭಿಪ್ರಾಯ ನೀಡುವಂತೆ ಮನವಿಯನ್ನು ಸಲ್ಲಿಸಿ ನಂತರ ನಿ.ಪಿ.25 ರಂತೆ ಅಂತಿಮ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಮನವಿಯನ್ನು ನಿ.ಪಿ.42 ಎಂದು ಹಾಗೂ ನಿ.ಪಿ.25 ಮತ್ತು 42 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.25(ಬಿ) ಹಾಗೂ 42(ಎ) ಎಂದು ಗುರುತಿಸಲಾಯಿತು. ಅಲ್ಲದೇ ಆ ಪೂರ್ವದಲ್ಲಿ ಚಾ.ಸಾ.20 ರವರಿಂದ ನಿ.ಪಿ.29 ರಂತೆ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿ.ಪಿ.29 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.29(ಎ) ಎಂದು ಗುರುತಿಸಲಾಯಿತು. ಅಲ್ಲದೇ ದಿಃ 21-04-2021 ರಂದು ಫ್ರಾ.ಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಅವರು ನನಗೆ ನಿ.ಪಿ.5 ರಂತೆ ಹೇಳಿಕೆ ನೀಡಿರುತ್ತಾರೆ. ಅಲ್ಲದೇ ಅವರ ಅಂಗಡಿಯಲ್ಲಿ ಫ್ರಾ.ಸಾ.1 ರವರು ಕೆಲಸ ಮಾಡುತ್ತಿರುವ ಕುರಿತಾಗಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿ.ಪಿ.43 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.43(ಎ) ಎಂದು ಗುರುತಿಸಲಾಯಿತು. ಅಲ್ಲದೇ ಫ್ರಾ.ಸಾ.1 ರವರನ್ನು ಲ್ಯಾಬ್ ಗೆ ಕರೆದುಕೊಂಡು ಹೋಗಿ ಅವರ ರಕ್ತದ ಗುಂಪನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನಿ.ಪಿ.44 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.44(ಎ) ಎಂದು ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಪಿತರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

(ಈ ಹಂತದಲ್ಲಿ ಸಾಕ್ಷಿಯ ಬಳಿ ಮೂಲ ಕಡತಗಳು ಇಲ್ಲದೇ ಇರುವುದು ಕಂಡುಬಂದಿದ್ದು, ಇಂತಹ ಗಂಭೀರ ಪ್ರಕರಣದಲ್ಲಿಯೂ ಎರಡನೇ ಬಾರಿ ಸಾಕ್ಷಿಯು ಮೂಾಲ ಕಡತಗಳಿಲ್ಲದೇ ಸಾಕ್ಷಿ ನುಡಿಯುತ್ತಿರುವುದು ಕಂಡುಬಂದಿದ್ದು, ಪಾಟೀಸವಾಲಿನ ವೇಳೆಯಲ್ಲಿ ಮೂಲ ಕಡತಗಳು ಅವಶ್ಯ ಎಂದು ಈ ಹಂತದಲ್ಲಿ ನ್ಯಾಯಾಲಯದ ಗಮನಕ್ಕೆ ಬಂದಿದ್ದು, ಆ ಕಾರಣ ಸಾಕ್ಷಿಗೆ ಮುಂದಿನ ಹಂತದಲ್ಲಿ ಮೂಲ ಕಡತಗಳನ್ನು ಪಡೆದುಕೊಂಡು ಪಾಟೀಸವಾಲಿಗೆ ಉತ್ತರಿಸಬೇಕು ಎಂಬ ಆದೇಶದೊಂದಿಗೆ ಪಾಟೀಸವಾಲನ್ನು ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

SC. No.165-2022
ಪಿಡಬ್ಲ್ಯೂ-16
ದಿಃ 13-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ದೂರಿನಲ್ಲಿ ದೂರುದಾರರು ಫ್ರಾ.ಸಾ.11 ಮತ್ತು 15 ರವರ ಹೆಸರನ್ನು ಹೇಳಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಹೆಸರು ಹೇಳಿರುವುದಿಲ್ಲ, ಆದರೆ ಜನರು ಹಾಗೂ ಪೋಲೀಸರು ಬಂದಿರುವುದಾಗಿ ಹೇಳಿದ್ದಾರೆ ಎಂದು ನುಡಿದಿರುತ್ತಾರೆ. ದೂರಿನಲ್ಲಿ ದೂರುದಾರರು ಚಾಕುವಿನ ವಿನ್ಯಾಸವನ್ನು ಹೇಳಿಕೊಂಡಿರುವುದಿಲ್ಲ ಎಂದರೆ ಸರಿ. ಈ ಪ್ರಕರಣ ಆಗಿದೆ ಎಂದು ಹೇಳಿದ ನಂತರ 1 ನೇ ಆರೋಪಿಯು ನಮ್ಮ ಠಾಣೆಗೆ ಫ್ರಾ.ಸಾ.1 ರವರ ವಿರುದ್ಧ ದೂರು ಸಲ್ಲಿಸಲು ಬಂದಿದ್ದ ಎಂದರೆ ಸರಿಯಲ್ಲ. ನಾನು ಕೆಟಿಜೆ ನಗರದಲ್ಲಿ ಕರ್ತವ್ಯ ಮಾಡುವಾಗ ಆಗ ಬಾಬು ಎನ್ನುವವರು ಡಿವೈ ಎಸ್ ಪಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ದಾವಣಗೆರೆಯಲ್ಲಿ ಸದರಿ ಬಾಬು ಡಿವೈ ಎಸ್ ಪಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಕೂಡ ಇರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಈ ಹಿಂದೆ ಕೆಲಸ ಮಾಡುತ್ತಿದ್ದರು ಎಂದು ಸಾಕ್ಷಿಯು ಮುಂದುವರೆದು ನುಡಿದಿರುತ್ತಾರೆ. ಸದರಿ ಬಾಬುರವರು ದೂರವಾಣಿ ಮಾಡಿ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಿ ಎಂದು ಹೇಳಿದ ಕಾರಣ ನಾನು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ದೂರುದಾರರು ಹಾಗೂ ಸದರಿ ಬಾಬು ಎನ್ನುವವರು ಸಂಬಂಧಿಕರಾಗಿದ್ದು, ಆ ವಿಷಯ ನನಗೆ ತಿಳಿದಿದೆ ಎಂದರೆ ಸರಿಯಲ್ಲ.

ನಾವು ಸಿಬ್ಬಂದಿಗಳ ಮೂಲಕ ಆರೋಪಿತರನ್ನು ವಶಕ್ಕೆ ಪಡೆದಿಲ್ಲ, ಬದಲಾಗಿ ಆರೋಪಿತರು ಫ್ರಾ.ಸಾ.1 ರವರ ವಿರುದ್ಧ ದೂರನ್ನು ದಾಖಲಿಸಲು ಬಂದಾಗ ನಾವು ಅವರನ್ನು ಠಾಣೆಯಲ್ಲಿಯೇ ವಶಕ್ಕೆ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಪಂಚನಾಮೆಗೆ ಹೋದ ಸಮಯದಲ್ಲಿ ಸದರಿ ಸ್ಥಳದ ಸುತ್ತ ಮುತ್ತಲೂ ಇರುವ ಕಟ್ಟಡಕ್ಕೆ ಸಿಸಿ ಟಿವಿ ಅಳವಡಿಸಲಾಗಿದೆಯೋ ಎಂದು ಪರಿಶೀಲಿಸಲಾಗಿದ್ದು, ಆದರೆ ಅಂತಹ ಯಾವುದೇ ಸಿಸಿ ಟಿವಿ ಅಳವಡಿಸಿರುವುದು ಕಂಡುಬಂದಿರುವುದಿಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಬೈಕಿನ ಕುರಿತು ಯಾವುದೇ ಪಾತ್ರ ಇಲ್ಲದೇ ಇದ್ದರೂ ಕೂಡ ಅದನ್ನು ವಶಕ್ಕೆ ಪಡೆದು ಮಾಲುಪಟ್ಟಿಗೆ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಹೆದರಿಸಿ ಬೆದರಿಸಿ ಅವರಿಂದ ಸ್ವ ಇಚ್ಛಾ ಹೇಳಿಕೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಂತರ ಆರೋಪಿತರು ತೋರಿಸಿದ ಪ್ರಕಾರ ಒಂದು ಅಂಗಡಿಗೆ ಹೋಗಿ ಅಲ್ಲಿ ಆರೋಪಿತರು ತಾವು ಚಾಕು ಖರೀದಿಸಿದ ಸ್ಥಳ ಎಂದು ತೋರಿಸಿಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಠಾಣೆಯಲ್ಲಿಯೇ ಬರೆದು, ಠಾಣೆಯಲ್ಲಿಯೇ ಪಂಚ ಸಾಕ್ಷಿದಾರರ ಸಹಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ದಾಖಲೆಗಳನ್ನೆಲ್ಲಾ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ

ಪ್ರಕರಣದಲ್ಲಿ ಆರೋಪಿತರು ತೋರಿಸಿದ ಪ್ರಕಾರ ಮು.ಮಾ.5 ನ್ನು ವಶಪಡಿಸಿಕೊಂಡಿದ್ದೇನೆ ಎಂದು ಬರೆಯಲಾಗಿದ್ದು, ಸದರಿ ಮು.ಮಾ.5 ರ ಮೇಲೆ ಬೆರಳಚ್ಚು ಸಿಗುವ ರೀತಿಯಲ್ಲಿ ಅದನ್ನು ಸರಿಯಾದ ರೀತಿಯಲ್ಲಿ ಸೀಲು ಮಾಡಿ ವಶಕ್ಕೆ ಪಡೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಚಾಕು ಬಯಲು ಪ್ರದೇಶದಲ್ಲಿ ಸಿಕ್ಕಿದ ಕಾರಣ ಅದರ ಮೇಲೆ ಬೆರಳಚ್ಚು ಸಿಗುವುದಿಲ್ಲ ಎಂದು ಗ್ರಹಿಸಿ ಸಾದಾ ರೀತಿಯಲ್ಲಿಯೇ ವಶಕ್ಕೆ ಪಡೆದಿದ್ದೇನೆ ಎಂದು ನುಡಿದಿರುತ್ತಾರೆ. ನಿ.ಪಿ.10 ಮತ್ತು 11 ರ ಪ್ರಕಾರ ಸದರಿ ಮು.ಮಾ.5 ಬಯಲು ಪ್ರದೇಶದಲ್ಲಿ ಅಲ್ಲ, ಬದಲಾಗಿ ಗಿಡಗಳ ಪೊದೆಯಲ್ಲಿ ದೊರೆತಿರುವ ರೀತಿಯಲ್ಲಿ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮು.ಮಾ.5 ರ ಮೇಲೆ ಬೆರಳಚ್ಚು ಸಿಗುವ ಸಾಧ್ಯತೆ ಕಡಿಮೆ ಎನ್ನುವ ಕುರಿತು ನಿ.ಪಿ.9 ಪಂಚನಾಮೆಯಲ್ಲಿ ಬರೆಯಲಾಗಿಲ್ಲ ಎಂದರೆ ಸರಿ. ಸದರಿ ಮು.ಮಾ.5 ನ್ನು ನಾವು ಸರಿಯಾದ ರೀತಿಯಲ್ಲಿ ಸಂಗ್ರಹಿಸಿ ಬೆರಳಚ್ಚು ತಜ್ಞರಿಗೆ ಕಳುಹಿಸಿದಲ್ಲಿ ಅದರ ಮೇಲೆ ಫ್ರಾ.ಸಾ.1 ರವರ ಬೆರಳಚ್ಚು ಸಿಗುವ ಸಾಧ್ಯತೆ ಇದ್ದ ಕಾರಣ ಅದನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸದೇ, ಬೆರಳಚ್ಚು ತಜ್ಞರಿಗೂ ಕೂಡ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾವು ಆರೋಪಿತರನ್ನು ಮೊದಲ ಬಾರಿಗೆ ವಶಕ್ಕೆ ಪಡೆದಾಗ ಅವರನ್ನು ಚಿಕಿತ್ಸೆಗಾಗಿ ವೈದ್ಯರ ಬಳಿ ಹಾಜರುಪಡಿಸಿದಾಗ ಅವರಲ್ಲಿ 1 ನೇ ಆರೋಪಿಯ ಬಲಗೈಯ ಮೇಲೆ ಹೊಲಿಗೆ ಹಾಕಿದ ಗಾಯ ಇತ್ತು ಎಂದು ವೈದ್ಯರು ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಆ ಕುರಿತು ದೋಷರೋಪಣಾ ಪಟ್ಟಿಯಲ್ಲಿ ಇರುವ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿದ್ದು, ಕಾರಣ ಸದರಿ ದಾಖಲೆಯನ್ನು ನಿ.ಪಿ.45 ಎಂದು ಗುರುತಿಸಲಾಯಿತು. ಸದರಿ ಗಾಯದ ಕುರಿತು ದೋಷರೋಪಣಾ ಪಟ್ಟಿಯ ಕಾಲಂ. ನಂ.17 ರಲ್ಲಿಯಾ ನಾವು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು 1 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಸದರಿ ಗಾಯದ ಕುರಿತು ಹೇಳಿಕೊಳ್ಳದೇ ಇರುವ ಕಾರಣ ತೋರಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿ.ಪಿ.45 ರಲ್ಲಿ 1 ನೇ ಆರೋಪಿಯು ತನ್ನ ಮೇಲೆ ತನಗೆ ಗೊತ್ತಿದ್ದ ವ್ಯಕ್ತಿ ಹಲ್ಲೆ ಮಾಡಿದ್ದಾನೆ ಎಂದು ವೈದ್ಯರ ಎದುರು ಹೇಳಿಕೊಂಡಿರುವುದು ಕಂಡುಬರುತ್ತಿದೆ ಎಂದರೆ ಸರಿ. ಸದರಿ 1 ನೇ ಆರೋಪಿಯು ವೈದ್ಯಾಧಿಕಾರಿಗಳ ಎದುರು ಆ ರೀತಿಯಾಗಿ ಸುಳ್ಳು ಹೇಳಿದ್ದಾನೆ ಎನ್ನುವ ಕುರಿತು ತನಿಖೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಆರೋಪಿಯು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ನಂತರ ತನ್ನ ಕೈಯಲ್ಲಿದ್ದ ಚಾಕುವನ್ನು 2 ನೇ ಆರೋಪಿಯು ಕಿತ್ತುಕೊಂಡು ಫ್ರಾ.ಸಾ.1 ರವರಿಗೆ ಚುಚ್ಚಲು ಹೋದಾಗ ಅವನು ಕಿರುಚಿಕೊಂಡಿದ್ದು, ಜನರು ಬರುತ್ತಿರುವುದನ್ನು ನೋಡಿ ಚುಚ್ಚುವುದು ಬೇಡ ಎಂದು ಕೈ ಅಡ್ಡ ಹಿಡಿದಾಗ ತನ್ನ ಕೈಗೆ ಚಾಕು ಇರಿತವಾಗಿರುತ್ತದೆ ಎಂದು ಹೇಳಿದ್ದಾನೆ ಎಂದು ನುಡಿದಿರುತ್ತಾರೆ. 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನಮಗೆ ಅನುಕೂಲವಾಗುವ ರೀತಿಯಲ್ಲಿ ನಾವು ತಯಾರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ 1 ನೇ ಆರೋಪಿಯನ್ನು ಪರೀಕ್ಷಿಸಿದ ವೈದ್ಯರನ್ನು ನಾನು ಸಾಕ್ಷಿದಾರರಾಗಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಚಾ.ಸಾ.16 ಆಗಿದ್ದು, ಅವರು ಈ ಹಂತದಲ್ಲಿ ತೀರಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ.

ನಾನು ಮು.ಮಾ.5 ನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸುವಾಗ ಅದರಲ್ಲಿ ಎಷ್ಟು ಗುಂಪಿನ ರಕ್ತವು ಇದೆ ಎಂದು ತಪಾಸಣೆ ಮಾಡುವಂತೆ ಕೇಳಿಕೊಂಡಿರುತ್ತೇನೆ. ನಿ.ಪಿ.27 ರಲ್ಲಿ ಕೇವಲ ಒಂದೇ ಗುಂಪಿನ ರಕ್ತದ ಗುಂಪು ಇದೆ ಎಂದು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾವು ಹಾಕಿದ ದೋಷರೋಪಣಾ ಪಟ್ಟಿಯಂತೆ ಮು.ಮಾ.5 ರಿಂದ ಫ್ರಾ.ಸಾ.1 ಹಾಗೂ 1 ನೇ ಆರೋಪಿಗೆ ಗಾಯವಾಗಿದೆ ಎಂದು ಹೇಳಲಾಗಿದೆ ಎಂದರೆ ಸರಿ. 1 ನೇ ಆರೋಪಿಯು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ಬಳಿಕ ನಮ್ಮ ಠಾಣೆಯಲ್ಲಿ ಫ್ರಾ.ಸಾ.1 ರವರೇ ನನ್ನನ್ನು ಕೊಲ್ಲಲು ಬಂದಿದ್ದರು ಎಂದು ದೂರನ್ನು ಅಂಚೆ ಮೂಲಕ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಅಂತಹ ಯಾವುದೇ ಮಾಹಿತಿ ಬಂದಿಲ್ಲ ಎಂದು ನುಡಿದಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ದಿಃ 21-01-2021 ರಂದು 1 ನೇ ಆರೋಪಿಯು ಅಂಚೆ ಮೂಲಕ ಸಲ್ಲಿಸಿದ ದೂರು ಸುಳ್ಳು ದೂರು ಆಗಿರುತ್ತದೆ ಎಂದು ಠಾಣಾ ಸಿಬ್ಬಂದಿ ಹೆಚ್ ಸಿ 135 ರವರು ದೂರನ್ನು ಇತ್ಯರ್ಥ ಮಾಡಿರುವುದು ಕಂಡುಬರುತ್ತಿದೆ ಎಂದರೆ ಸಾಕ್ಷಿಯು ತಾನು ಠಾಣೆಯಲ್ಲಿ ಇರದ ಸಮಯ ಸಿಬ್ಬಂದಿ ಮಾಡಿರಬಹುದು ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.5 ಎಂದು ಗುರುತಿಸಲಾಯಿತು.

ನಾನು ಫ್ರಾ.ಸಾ.11 ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಳ್ಳುವಾಗ ಅವರಿಂದ ಯಾಕೆ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿಲ್ಲ ಹಾಗೂ ಯಾಕೆ ಮಾಹಿತಿಯನ್ನು ಠಾಣೆಗೆ ಸಲ್ಲಿಸಿಲ್ಲ ಎಂದು ವಿಚಾರಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆ ರೀತಿಯಾಗಿ ಹೇಳಿಕೆ ಪಡೆದಿಲ್ಲ, ಆದರೆ ಅವರು ನನ್ನ ಸಮಕ್ಷಮ ತಾನು ಊಟಕ್ಕೆ ಹೋಗುವಾಗ ಗಲಾಟೆಯಾಗಿದ್ದು, ಆಗ ಒಂದು ಆಟೋದ ಮೂಲಕ ಗಾಯಾಳುವನ್ನು ಆಸ್ಪತ್ರೆಗೆ ಕಳುಹಿಸಿದ್ದೇನೆ ಎಂದು ಹೇಳಿರುವುದಾಗಿ ನುಡಿದಿರುತ್ತಾರೆ. ಸದರಿ ಫ್ರಾ.ಸಾ.1 ರವರು ಈ ಪ್ರಕರಣದ ನೇರ ಸಾಕ್ಷಿ ಅಲ್ಲದೇ ಇದ್ದರೂ ಕೂಡ ಅವರನ್ನು ಸಾಕ್ಷಿದಾರರೆಂದು ನಾನು ಈ ಪ್ರಕರಣದಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಎಲ್ಲಾ ಪಂಚನಾಮೆಗಳನ್ನು ಠಾಣೆಯಲ್ಲಿಯೇ ತಯಾರಿಸಿ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡದೇ ಇರುವುದು ಕಂಡುಬಂದಿದ್ದರೂ ಕೂಡ ಅವರ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.